# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ನಂ.174 ಹೆಚ್.ಎಸ್.ಆರ್ ಬಡಾವಣೆ ವಾರ್ಡ್ ಸಮಿತಿ ಸಭೆಯ ನಡುವಳಿಗಳು

ಮಾನ್ಯ ನೋಡಲ್ ಅಧಿಕಾರಿ/ಜಂಟಿ ಆಯುಕ್ತರು (ಮಹದೇವಪುರ) ರವರು ದಿನಾಂಕ: 06.03.2021 ರಂದು ಬೆಳಿಗ್ಗೆ 11:00 ಘಂಟೆಗೆ ವಾರ್ಡ್ ಸಮಿತಿ ಸಭೆಯನ್ನು ವಾರ್ಡ್ ನಂ.174 ಹೆಚ್.ಎಸ್.ಆರ್ ಕಛೇರಿಯಲ್ಲಿ ನಡೆಸಿದ್ದು, ಸಭೆಯ ನಡವಳಿ ಈ ಕೆಳಕಂಡಂತಿರುತ್ತದೆ.

**ಉಪಸ್ಥಿತರು:**

| | ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರು |
|---|---|
| 1. | ಶ್ರೀ ಆರ್. ವೆಂಕಟಚಾಲಪತಿ ಕ.ಆ.ಸೇ, ನೋಡಲ್ ಅಧಿಕಾರಿ ವಾ.ನಂ.174 ಹಾಗೂ ಜಂಟಿ ಆಯುಕ್ತರು (ಮಹದೇವಪುರ) ವಲಯ |
| 2. | ಶ್ರೀ ರವಿ.ಡಿ, ಸಹಾಯಕ ಕಾರ್ಯಪಾಲಕ ಅಭಿಯಂತರರು. ಯೋಜನೆ ವಿಭಾಗ |
| 3. | ಶ್ರೀ ಹನುಮಂತರಾಯ ಸಹಾಯಕ ಕಾರ್ಯಪಾಲಕ ಅಭಿಯಂತರರು, ಹೆಚ್.ಎಸ್.ಆರ್ ಉಪವಿಭಾಗ/ಬೃಹತ್ ನೀರುಗಾಲುವೆ |
| 4. | ಶ್ರೀ ಮಂಜುನಾಥ ಸ್ವಾಮಿ ಬಿ.ಸಿ, (ಪಿ.ಎಸ್.ಐ) ಹೆಚ್.ಎಸ್.ಆರ್ ಪೋಲಿಸ್ ಠಾಣೆ |
| 5. | ಶ್ರೀಮತಿ ಲಕ್ಷ್ಮಿ.ಬಿ, ಸಹಾಯಕ ಕಂದಾಯ ಅಧಿಕಾರಿ ಹೆಚ್.ಎಸ್.ಆರ್ ಬಡಾವಣೆ |
| 6. | ಶ್ರೀ ಸಾಯಿಬಣ್ಣ ಸಹಾಯಕ ಅಭಿಯಂತರರು (ಬಿಡಬ್ಲ್ಯೂಎಸ್ಎಸ್ಬಿ) |
| 7. | ಶ್ರೀ ರಮೇಶ್ ಡಿ, ಕಿರಿಯ ಅಭಿಯಂತರರು, ವಿದ್ಯುತ್ ವಿಭಾಗ, ಬೊಮ್ಮನಹಳ್ಳಿ ವಲಯ |
| 8. | ಶ್ರೀ ವಿಕ್ರಾಂತ್ ಕೆ. ಸಹಾಯಕ ಅಭಿಯಂತರರು, ಬೃಹತ್ ನೀರುಗಾಲುವೆ |
| 9. | ಶ್ರೀ ಅರುಣ ಕೆ ದೇಸಾಯಿ, ಹಿರಿಯ ಪಶುವೈದ್ಯಾಕಿಯ ಪರಿವೀಕ್ಷಕರು, (ಪಶುಪಾಲನಾ ಇಲಾಖೆ) |
| 10. | ಶ್ರೀಮತಿ ಸತ್ಯವಾಣಿ, ಕಿ.ಆ.ಪ. ವಾರ್ಡ್ ಸಂ. 174 |
| 11. | ಶ್ರೀ ಮದನ್ ಬಿ.ಎಂ ಮಾರ್ಷಲ್, ವಾರ್ಡ್ ಸಂ. 174 |
| 12. | ಶ್ರೀ ಚಂದ್ರಶೇಖರ ಹೆಚ್.ಇ. ಆರ್.ಡಬ್ಲ್ಯೂ.ಎ/ ಸದಸ್ಯರು |
| 13. | ಶ್ರೀ ಬಿ.ಎನ್.ಆರ್ ರೆಡ್ಡಿ ಆರ್.ಡಬ್ಲ್ಯೂ.ಎ/ಸದಸ್ಯರು |
| 14. | ಶ್ರೀ ರಾಮಚಂದ್ರ, ಆರ್.ಡಬ್ಲ್ಯೂ.ಎ/ಸದಸ್ಯರು |
| 15. | ಶ್ರೀ ರವಿ ಬಿ, ಆರ್.ಡಬ್ಲ್ಯೂ.ಎ/ಸದಸ್ಯರು |
| 16. | ಶ್ರೀ ಬಿ.ಎಂ ರಮೇಶ್, ಆರ್.ಡಬ್ಲ್ಯೂ.ಎ/ಸದಸ್ಯರು |
| 17. | ಶ್ರೀ ವಿದ್ಯಾಸಾಗರ, ಆರ್.ಡಬ್ಲ್ಯೂ.ಎ/ಸದಸ್ಯರು |

ಮಾನ್ಯ ನೋಡಲ್ ಅಧಿಕಾರಿ/ಜಂಟಿ ಆಯುಕ್ತರು (ಮಹದೇವಪುರ) ರವರ ಸಮ್ಮುಖದಲ್ಲಿ ಸಭೆಗೆ ಹಾಜರಾದ ಎಲ್ಲಾ ಇಲಾಖೆಯ ಅಧಿಕಾರಿ/ಸಿಬ್ಬಂದಿ ಹಾಗೂ ಸಂಘ ಸಂಸ್ಥೆಗಳ ಪದಾಧಿಕಾರಿಗಳಿಗೆ ಮತ್ತು ಸಾರ್ವಜನಿಕರಿಗೆ ಸ್ವಾಗತ ಕೋರುತ್ತಾ, ಸಭೆಯನ್ನು ಪ್ರಾರಂಭಿಸಲಾಯಿತು.

ಹಿಂದಿನ ಸಭಾ ನಡವಳಿಯ ಪ್ರತಿ ಅಂಶದ ಬಗ್ಗೆ ಚರ್ಚಿಸಿ, ಘನತ್ಯಾಜ್ಯ ನಿರ್ವಹಣೆ, ತೋಟಗಾರಿಕೆ, ವಿದ್ಯುತ್, ಬಿ.ಡಬ್ಲ್ಯೂ.ಎಸ್.ಎಸ್.ಬಿ, ಬೆಸ್ಕಾಂ ಹಾಗೂ ಇಂಜಿಯರಿಂಗ್ ಎಲ್ಲಾ ಇಲಾಖೆಯು ಉತ್ತಮ ರೀತಿಯಲ್ಲಿ ಕಾರ್ಯನಿರ್ವಹಿಸಿ ಹಾಗೂ ಸಾರ್ವಜನಿಕರ ದೂರುಗಳಿಗೆ ಸುಧಾರಣೆ ತಂದಿರುವುದನ್ನು ಗಮನಿಸಿದ್ದು, ಇನ್ನು ಉತ್ತಮ ರೀತಿಯಲ್ಲಿ ಮುಂದುವರೆಸಲು ನೋಡಲ್ ಅಧಿಕಾರಿಯವರು ತಿಳಿಸಿದರು.

Scanned with Car

| ಕ್ರ.ಸಂ | ಇಲಾಖೆ | ವಿಷಯ |
|---|---|---|
| 1 | ಕಾಮಗಾರಿ ಇಲಾಖೆ | ವಾರ್ಡ್ ವ್ಯಾಪ್ತಿಯ ರಸ್ತೆಯಲ್ಲಿ ಪಾಟ್‌ಹೋಲ್‌ಗಳನ್ನು ಮುಚ್ಚಿಸುವಂತೆ ಸದಸ್ಯರು ಕೋರಿರುತ್ತಾರೆ. ಈ ಬಗ್ಗೆ ಬಿಬಿಎಂಪಿ ವ್ಯಾಪ್ತಿಯ ಪ್ರದೇಶಗಳಲ್ಲಿ ಪಾಟ್‌ಹೋಲ್‌ಗಳನ್ನು ಮುಚ್ಚಲು ಉಚ್ಛನ್ಯಾಯಾಲಯದ ಆದೇಶ/ನಿರ್ದೇಶನದಂತೆ Karnataka State legal service authority ರವರು ಸರ್ವೆ ಮಾಡಿದ್ದು, ಅವರ ವರದಿ ಪ್ರಕಾರ ಹಾಗೂ ವಾರ್ಡ್ ವ್ಯಾಪ್ತಿಯ ರಸ್ತೆಯಲ್ಲಿ ಪಾಟ್ ಹೋಲ್‌ಗಳನ್ನು ಮುಚ್ಚುವಂತೆ ಅಧ್ಯಕ್ಷರು ರವರು ಸೂಚಿಸಿರುತ್ತಾರೆ.<br>• ವಾರ್ಡ್ ವ್ಯಾಪ್ತಿಯ ಚರಂಡಿಗಳಲ್ಲಿ ಹೂಳೆತ್ತಲು ಕ್ರಿಯಾಯೋಜನೆ ಸಿದ್ಧಪಡಿಸಿ ಸೆಕ್ಟರ್‌ವಾರು ಸ್ವಚ್ಛಗೊಳಿಸುವಂತೆ ಸದಸ್ಯರು ಸಭೆಯಲ್ಲಿ ಕೋರಿರುತ್ತಾರೆ.<br>• ಗೇಲ್ ಗ್ಯಾಸ್ ಸಂಸ್ಥೆ ರವರು ರಸ್ತೆ ಅಗೆದಿರುವ ಕಾರಣ ವಾಹನ ಸಂಚಾರಕ್ಕೆ ಮತ್ತು ಸಾರ್ವಜನಿಕರ ಓಡಾಟಕ್ಕೆ ತೊಂದರೆ ಉಂಟಾಗಿದ್ದು, ಸದರಿ ಸಂಸ್ಥೆ ರವರಿಗೆ ನಿರ್ದೇಶಿಸುವಂತೆ ಸದಸ್ಯರು ಕೋರಿರುತ್ತಾರೆ. ಈ ಬಗ್ಗೆ ಕ್ರಮ ವಹಿಸುಂತೆ ಅಧ್ಯಕ್ಷರು ಸಹಾಯಕ ಅಭಿಯಂತರರಿಗೆ ಸೂಚಿಸಿರುತ್ತಾರೆ.<br>**ಕ್ರಮ : ಸಹಾಯಕ ಅಭಿಯಂತರರು, ವಾರ್ಡ್ ನಂ. 174** |
| 2 | ಬೆಸ್ಕಾಂ | ವಾರ್ಡ್ ವ್ಯಾಪ್ತಿಯಲ್ಲಿ ಬೆಸ್ಕಾಂ ಉಪವಿಭಾಗದಿಂದ ಪಾದಚಾರಿ ಮಾರ್ಗದಲ್ಲಿ ಟ್ರಾನ್ಸ್‌ಫಾರ್ಮರ್ ಅಳವಡಿಸಿದ್ದು, ಸಾರ್ವಜನಿಕರಿಗೆ ಪಾದಚಾರಿ ಮಾರ್ಗದಲ್ಲಿ ಓಡಾಡಲು ಕಷ್ಟಕರವಾಗಿದ್ದು, ಸದರಿ ವಿಭಾಗದವರು ಸೂಕ್ತ ಜಾಗವನ್ನು ಪರಿಶೀಲಿಸಿ ಸ್ಥಳಾಂತರ ಮಾಡಲು ವಾರ್ಡ್ ಸದಸ್ಯರು ಕೋರಿರುತ್ತಾರೆ. ಇಂದಿನ ಸಭೆಯಲ್ಲಿ ಸಹಾಯಕ ಅಭಿಯಂತರರು/ಕಿರಿಯ ಅಭಿಯಂತರರು ಸಭೆಗೆ ಗೈರಹಾಜರಾಗಿದ್ದು, ಕಾರ್ಯದರ್ಶಿ ರವರಿಗೆ ಪತ್ರವನ್ನು ಬರೆಯುವಂತೆ ಅಧ್ಯಕ್ಷರು ಸೂಚಿಸಿರುತ್ತಾರೆ.<br>• ವಾರ್ಡ್ ವ್ಯಾಪ್ತಿಯಲ್ಲಿ ಹೆಚ್.ಟಿ ಕೇಬಲ್ ಹಾದುಹೋಗಿದ್ದು, ಇದನ್ನು ತೆರವುಗೊಳಿಸುವಂತೆ ಸದಸ್ಯರು ಕೋರಿರುತ್ತಾರೆ ಹಾಗೂ ಕೇಬಲ್ 8–10 ಅಡಿ ಮೇಲ್ಭಾಗದಿಂದ ಕೆಳಗೆ ನೇತಾಡುತ್ತಿದ್ದು, ಇನ್ನೂ ಎತರಕ್ಕೆ ಹಾಕುವಂತೆ ಸದಸ್ಯರು ಕೋರಿರುತ್ತಾರೆ. ಈ ಬಗ್ಗೆ ಕ್ರಮ ವಹಿಸುವಂತೆ ಸಂಬಂಧಪಟ್ಟ ಅಭಿಯಂತರರಿಗೆ ಅಧ್ಯಕ್ಷರು ಸೂಚಿಸಿರುತ್ತಾರೆ.<br>**ಕ್ರಮ : ಸಹಾಯಕ ಅಭಿಯಂತರರು, ಬೆಸ್ಕಾಂ** |
| 3 | ಬಿ.ಡಬ್ಲ್ಯೂ.ಎಸ್.ಎಸ್.ಬಿ | • ಬೇಸಿಗೆ ಕಾಲ ಪ್ರಾರಂಭವಾಗಿದ್ದು, ವಾರ್ಡ್ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ವ್ಯವಸ್ಥೆಯನ್ನು 3 ದಿನಕ್ಕೆ ಒಂದು ಬಾರಿ ಆದರೂ ಬಿಡುಗಡೆ ಮಾಡುವಂತೆ ಸದಸ್ಯರು ಕೋರಿರುತ್ತಾರೆ ಹಾಗೂ ಸೆಕ್ಟರ್‌ವಾರು ಪರ್ಯಾಯ ಸಮಯವನ್ನು ನಿಗಿದಿಪಡಿಸಿ ವೇಳಾ ಪಟ್ಟಿ ಸಿದ್ಧಪಡಿಸಿ ಕುಡಿಯುವ ನೀರಿನ ವ್ಯವಸ್ಥೆಯನ್ನು ಒದಗಿಸಲು ಸಭೆಯಲ್ಲಿ ಸದಸ್ಯರು ಕೋರಿರುತ್ತಾರೆ. ಈ ಬಗ್ಗೆ 5ನೇ ಹಂತದ ನೀರಿನ ಟ್ಯಾಂಕ್ ಕಾಮಗಾರಿ ಪ್ರಗತಿಯಲ್ಲಿದ್ದು, ಹಾಗೂ 20 ಎಂ.ಎಂ ಕುಡಿಯುವ ನೀರಿನ Hose pipe ಅಲ್ಲಿ ನೀರು ಒದಗಿಸುತ್ತಿದ್ದು, 3 ದಿನಕ್ಕೆ ಒಂದು ಬಾರಿ ಕುಡಿಯುವ ನೀರಿನ ವ್ಯವಸ್ಥೆ ಬಗ್ಗೆ ಕ್ರಮವಹಿಸುವುದಾಗಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ಸಭೆಯಲ್ಲಿ ತಿಳಿಸಿರುತ್ತಾರೆ.<br>• ಇಬ್ಬಲೂರು ಗ್ರಾಮದಲ್ಲಿ ಛೇಂಬರ್‌ನಲ್ಲಿ ಚೋಕ್ ಆಗಿ ಮನೆಯೊಳಗೆ ಒಳಚರಂಡಿ ನೀರು ನುಗುತ್ತಿದ್ದು, ಈ ಬಗ್ಗೆ ಎನ್.ಜಿ.ಟಿಯಲ್ಲಿ ಪ್ರಕರಣ ದಾಖಲಾಗಿದೆ ಈ ಬಗ್ಗೆ ಖಾಯಂ ಪರಿಹಾರ ಒದಗಿಸಲು ವಾರ್ಡ್ ಸದಸ್ಯರು ಕೋರಿರುತ್ತಾರೆ. ಈ ಬಗ್ಗೆ ಅಧ್ಯಕ್ಷರು ಅತಿ ಜರೂರಾಗಿ ಸ್ಥಳ ಪರಿಶೀಲಿಸಿ ಕ್ರಮ ವಹಿಸುವಂತೆ ಸೂಚಿಸಿರುತ್ತಾರೆ. |

Scanned with Car

| | | |
|---|---|---|
| | ಪೋಲಿಸ್ ಇಲಾಖೆ | ಹೆಚ್.ಎಸ್.ಆರ್ ಬಡಾವಣೆ ವಾರ್ಡ್ ವ್ಯಾಪ್ತಿಯಲ್ಲಿ ಒಟ್ಟು 48 ಸಿ ಸಿ ಕ್ಯಾಮೆರಾಗಳು ದುರಸ್ಥಿಯಾಗಿರುವ ಬಗ್ಗೆ ಸದಸ್ಯರು ಸಭೆಯ ಗಮನಕ್ಕೆ ತಂದಿರುತ್ತಾರೆ. ಈ ಬಗ್ಗೆ ಪ್ರಸ್ತುತ ಸಾಲಿನಲ್ಲಿ ಟೆಂಡರ್ ಕರೆದು ಅಳವಡಿಸಲು ಅಧ್ಯಕ್ಷರು ತಿಳಿಸಿರುತ್ತಾರೆ.<br>ಈ ಬಗ್ಗೆ ಪಿ.ಎಸ್.ಐ ರವರು ಮಾತನಾಡುತ್ತಾ, ನನ್ನ ಗಮನಕ್ಕೆ ಬಂದಿದ್ದು, ಹಾಗೂ ಕೆಲವು ಚೈನ್ ಸ್ನಾಚಿಂಗ್/ಮೊಬೈಲ್ ಸ್ನಾಚಿಂಗ್ ಪ್ರಕರಣದಲ್ಲಿ ದುಷ್ಕರ್ಮಿಗಳನ್ನು ಹಿಡಿಯಲು ಕಷ್ಟವಾಗಿದ್ದು, ಈ ಬಗ್ಗೆ ಸಿ ಸಿ ಕ್ಯಾಮರಾ ಪರಿಶೀಲಿಸಿದ್ದು, ವಾಣಿಜ್ಯ ಮಳಿಗೆಗಳು ಬಿಟ್ಟರೆ ವಸತಿ ಪ್ರದೇಶದಲ್ಲಿ ಮಾಲೀಕರು ಸಿಸಿ ಕ್ಯಾಮೇರಾ ಅಳವಡಿಸದಿರುವುದು ಬೇಸರಾ ತಂದಿದ್ದು, ಇಂತಹ ಅಭಿವೃದ್ಧಿ ಬಡಾವಣೆಯಲ್ಲಿ ಮನೆಗೊಂದು ಸಿಸಿ ಕ್ಯಾಮರಾ ಅಳವಡಿಸಿಕೊಳ್ಳಬೇಕೆಂದು ಪಿ.ಎಸ್.ಐ ರವರು ತಿಳಿಸಿರುತ್ತಾರೆ.<br>• ವಾರ್ಡ್ ವ್ಯಾಪ್ತಿಯ ಕೆಲವು ಉದ್ಯಾನವನಗಳಲ್ಲಿ ಅನೈತಿಕ ಚಟುವಟಿಕೆಗಳನ್ನು ನಡೆಯುತ್ತಿದೆವೆಂದು ಸದಸ್ಯರು ಸಭೆಯ ಗಮನಕ್ಕೆ ತಂದಿರುತ್ತಾರೆ, ಈ ಬಗ್ಗೆ ಪಿ.ಎಸ್.ಐ ರವರು ಸಾರ್ವಜನಿಕರು ಇಂತಹ ಚಟುವಟಿಕೆಗಳನ್ನು ನಡೆಯುತ್ತಿರುವುದು ಕಂಡಿದ್ದಲ್ಲಿ ಪೋಲಿಸ್ ಕಂಟ್ರೋಲ್ ರೂಂ ನಂಬರ್ 100ಕ್ಕೆ ಕರೆ ಮಾಡಿದರೆ ತಕ್ಷಣ ಹೊಯಸ್ಸಳ ಸಿಬ್ಬಂದಿಗಳು ಸ್ಥಳಕ್ಕೆ ಭೇಟಿ ನೀಡುತ್ತಾರೆಂದು ತಿಳಿಸಿರುತ್ತಾರೆ.<br>• ವಾರ್ಡ್ ವ್ಯಾಪ್ತಿಯಲ್ಲಿ ಬೈಕ್ ಸವಾರರು ರಾತ್ರಿಯ ವೇಳಯಲ್ಲಿ ಜೋರಾಗಿ ಶಬ್ದ ಮಾಡಿ ಬೈಕ್ ಉಪಯೋಗಿಸುತ್ತಿದ್ದು, ರಸ್ತೆಯಲ್ಲಿಯೆ ಕಿರುಚಾಡುಕೊಂಡು ಅಡ್ಡಾದಿಡ್ಡಿ ಓಡಾಡುತ್ತಿದ್ದಾರೆ ಹಾಗೂ ಅನುಮಾನಸ್ಪದ ವ್ಯಕ್ತಿಗಳು ಸ್ಥಳೀಯ ಯುವಕರ ಜೊತೆಯಲ್ಲಿ ಹರಳಿಕಟ್ಟೆಯ ಮೇಲೆ ಕೂತಿಕೊಂಡು ಮಾತಾನಾಡುತ್ತಿರುತ್ತಾರೆ ಮತ್ತು ರಸ್ತೆಯಲ್ಲಿ ಓಡಾಡುವ ಯುವಕರನ್ನು ಅಡ್ಡ ಹಾಕುತ್ತಿರುತ್ತಾರೆಂದು ಸಭೆಯ ಗಮನಕ್ಕೆ ಸದಸ್ಯರು ತಂದಿರುತ್ತಾರೆ. ಈ ಬಗ್ಗೆ ಪಿ.ಎಸ್.ಸಿ ರವರು ಅನುಮಾನಸ್ಪದ ವ್ಯಕ್ತಿಗಳು ಕಂಡರೆ ತಕ್ಷಣವೇ ನಮಗೆ ತಿಳಿಸಲು ಸೂಚಿಸಿರುತ್ತಾರೆ.<br>• ಹೆಚ್.ಎಸ್.ಆರ್ ಬಡಾವಣೆಯಲ್ಲಿ 4 Out post ಅಲ್ಲಿ ಒಂದನ್ನು ಮಾತ್ರ ಸ್ಥಾಪಿಸಲಾಗಿದ್ದು, ಕೆಲವು ಕಡೆ ಬ್ಯಾರಿಕೆಡಿಂಗ್ ಹಾಕಿದ್ದು, ಇನ್ನೂಳಿದ ಕಡೆ Out post ಸ್ಥಾಪಿಸಲು ಕ್ರಮವಹಿಸಲಾಗುತ್ತಿದೆ ಹಾಗೂ ರಾತ್ರಿ ಪಾಳಿಯ ನಮ್ಮ ಸಿಬ್ಬಂದಿಗಳು ಬಿಟ್ ಪ್ರಾರಂಭಿಸುವ ಸ್ಥಳದಿಂದ ಮೊಬೈಸ್‌ನಲ್ಲಿ ಸ್ಕ್ಯಾನ್ ಮಾಡಿ ಬಿಟ್ ಮುಗಿಯುವ ಸ್ಥಳದ ವರೆಗೆ ಕರ್ತವ್ಯ ಮಾಡುತ್ತಿರುವುದಾಗಿ ಪಿ.ಎಸ್.ಐ ರವರು ತಿಳಿಸಿರುತ್ತಾರೆ. ಈ ಬಗ್ಗೆ ಸದಸ್ಯರಾದ ರವಿಯವರು ಮಾತನಾಡುತ್ತಾ ರಾಜೀವಗಾಂಧಿ ನಗರ (ಗುಂಡ್‌ತೋಪ್) ಸರ್ವಿಸ್ ರಸ್ತೆಯಲ್ಲಿ ಮರಳುಗಾಡಿ ಸ್ಟ್ಯಾಂಡ್‌ನಲ್ಲಿ ಹೆಚ್ಚುವರಿ ಬಿಟ್ ಸ್ಥಾಪಿಸಲು ಕೋರಿರುತ್ತಾರೆ.<br>• ವಾರ್ಡ್ ವ್ಯಾಪ್ತಿಯಲ್ಲಿ ಸರ್ಕಾರದ Notification ಪ್ರದೇಶವಲ್ಲದ ಸ್ಥಳದಲ್ಲಿ Barcading ಅಳವಡಿಸಿರುವುದನ್ನ ತೆರವುಗೊಳಿಸಲು ಸಂಚಾರಿ ಪೋಲಿಸ್ ಸಿಬ್ಬಂದಿ ರವರಿಗೆ ಸಹಕರಿಸುವಂತೆ ವಾರ್ಡ್ ಸದ್ಯಸರು ಕೋರಿರುತ್ತಾರೆ.<br>ಈ ಬಗ್ಗೆ ಕ್ರಮ ವಹಿಸುವಂತೆ ಅಧ್ಯಕ್ಷರು ಸಂಬಂಧಪಟ್ಟ ಅಧಿಕರಿಗಳಿಗೆ ಸೂಚಿಸಿರುತ್ತಾರೆ.<br>**ಕ್ರಮ : ಪೋಲಿಸ್ ಇನ್ಸಪೆಕ್ಟರ್, ಹೆಚ್.ಎಸ್.ಆರ್ ಪೋಲಿಸ್ ಠಾಣೆ** |

Scanned with Car

ಅಂತಿಮವಾಗಿ ಮಾನ್ಯ ನೋಡಲ್ ಅಧಿಕಾರಿಗಳು, ವಾರ್ಡ್ ನಂ. 174 ಹಾಗೂ ಜಂಟಿ ಆಯುಕ್ತರು (ಮಹಾದೇವಪುರ) ವಲಯ ರವರು ಸಭೆಯಲ್ಲಿ ಚರ್ಚಿಸಲಾದ ಎಲ್ಲಾ ವಿಷಯಗಳ ಬಗ್ಗೆ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ತುರ್ತು ಕ್ರಮವಹಿಸಲು ಸೂಚಿಸಿದರು ಹಾಗೂ ಸಾರ್ವಜನಿಕರು ನೀಡಿರುವ ದೂರಿನ ಬಗ್ಗೆ ಅಗತ್ಯ ಕ್ರಮವಹಿಸುವುದಾಗಿ ತಿಳಿಸುತ್ತಾ ಸಭೆಯಲ್ಲಿ ಹಾಜರಿದ್ದ ಎಲ್ಲಾರಿಗೂ ವಂದನೆಗಳನ್ನು ಸಲ್ಲಿಸುವುದರ ಮೂಲಕ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

Lakshmi

ಕಾರ್ಯದರ್ಶಿ
ಸಹಾಯಕ ಅಭಿಯಂತರು
ಹೆಚ್.ಎಸ್.ಆರ್.ಬಡಾವಣೆ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ನೋಡಲ್ ಅಧಿಕಾರಿ ವಾರ್ಡ್ ನಂ.174
ಹೆಚ್.ಎಸ್.ಆರ್.ಬಡಾವಣೆ ಹಾಗೂ
ಜಂಟಿ ಆಯುಕ್ತರು ಮಹದೇವಪುರ ವಲಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

16/3/21

Scanned with Car